ಕವಿತೆ




## ಕಮಲಾಕರ ಕಡವೆ

ಕಲೆ: ರೂಪಶ್ರೀ ಕಲ್ಲಿಗನೂರು




# ರಹಸ್ಯಮಯಿ ನದಿ

ಒಂದು ರಹಸ್ಯಮಯಿ ನದಿಯು ಹರಿದಿದೆ
ಎಲ್ಲ ಆವಿಷ್ಕಾರಗಳ ಅಂತರ್ಯದಲ್ಲಿ
ಎಲ್ಲ ಆರೈಕೆಗಳ ಹಿನ್ನೆಲೆಯಲ್ಲಿ
ಎಲ್ಲ ಕವಿತೆಗಳ ಚೇತನದಲ್ಲಿ

ಸೂರ್ಯಕಾಂತಿಯ ಕಂಡು ಸೂರ್ಯ ಪಡುವನೇ ಜಂಭ?
ಉದ್ದೇಶವೇ ಇರದೆ ತಾನೇ ಅಲೆಯುಪ್ಪಳಿಸುವುದು ದಂಡೆಗೆ?
ರಕ್ತಕ್ಕೆ ಮಾತ್ರ ತನ್ನವರ ನಂಟು ಏಕೆ?

ಈಡಿಪಸ್ ಆಗುವುದೆಂದರೆ ನಾಟಕದ ನಾಯಕನಾಗುವುದಲ್ಲ;
ವಿಧಿಯ ವ್ಯತಿರಿಕ್ತ ಹೋಗದೇ ಹುಟ್ಟುವುದೇ ಇಲ್ಲ ರುದ್ರ ನಾಟಕ.

ನೀಲಿ ಬಾನು, ರಾಡಿಯಾಗದ ರೋಡು, ಪುಷ್ಕಳ ಬೆಳಕ ಬೇಡುವವರೇ,
ಮೋಡ ಕಟ್ಟದೇ ಮಳೆ ಬಂದೀತು ಹೇಗೆ? ಮೊಳಕೆ ಬಿರಿದೀತು ಹೇಗೆ?

ಕತ್ತಲಿನಲ್ಲಿಯೇ ಬಿರಿಯುವುದು ಮುಂಜಾನೆಯ ಬೀಜ
ಬೆಳಗನ್ನು ತಡೆಯುವ ಶಕ್ತಿ ಯಾವ ರಾತ್ರಿಗೂ ಇಲ್ಲ

ಮನೆಯ ಅಡಿಗಡಿಗೂ ಗಿಡಿದು ತುಂಬಿದ ನೆನಪುಗಳು.
ವರುಷಗಳು ತುಳುಕುವ ಕೋಣೆ ಈಗ ಖಾಲಿ

ಹೂವಿನಿಂದಲೂ ಇರಿಯಬಹುದು ಇರಾದೆ ಇದ್ದರೆ
ಮುಳ್ಳು ಎಷ್ಟೇ ಇರಲಿ ಹೂವರಳದೇ ಇರದು

